# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-08

Cw-22

ಸಾಕ್ಷಿದಾರರ ಹೆಸರುಃ ಪುಟ್ಟಯ್ಯ ಹಿರೇಮಠ
ತಂದೆಃಗಂಡನ ಹೆಸರುಃ ರೇವಣಸಿದ್ದಯ್ಯ
ವಯಸ್ಸುಃ 24 ವರ್ಷ
ಉದ್ಯೋಗಃ ಚಾಲಕ
ವಾಸ ಸ್ಥಳಃ ಹಾವೇರಿ

**ದಿನಾಂಕ:05.09.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರು, ಮೃತ ನಿಂಗಪ್ಪ ಗೊತ್ತಿಲ್ಲ. ನಿಂಗಪ್ಪ ಯಾವ ರೀತಿ ತೀರಿಕೊಂಡ ಗೊತ್ತಿಲ್ಲ. ಯಾರು ಕೊಲೆ ಮಾಡಿದ್ದಾರೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

ದಿನಾಂಕಃ17.03.2021 ರಂದು ಮುಂಜಾನೆ 9.30 ಗಂಟೆ ಸಮಯದಲ್ಲಿ ನಮ್ಮ ಮಾವ ನನಗೆ ಪೋನ್ ಮಾಡಿ ಒಂದು ಜೊತೆ ನಾನು ಹಾಕಿಕೊಳ್ಳುವ ಬಟ್ಟೆಯನ್ನು ತೆಗೆದುಕೊಂಡು ಬರಲು ತಿಳಿಸಿದ ಎಂದರೆ ಸರಿಯಲ್ಲ. ನಾನು ಮನೆಯಲ್ಲಿದ್ದ ನನ್ನ ಮಾವನ ಬಟ್ಟೆ ತೆಗೆದುಕೊಂಡು ಬೈ ಪಾಸ್ ಹತ್ತಿರ ಹೋಗಿ ಅವರಿಗೆ ಕೊಟ್ಟೆನು ಎಂದರೆ ಸರಿಯಲ್ಲ. ಆಗ ನನ್ನ

ಮಾವ ಸಪ್ಪಗಿದ್ದನು ಯಾಕೆ ಅಂತಾ ಕೇಳಿದಾಗ ನನ್ನ ಕೆಲಸ ಇದೆ ಬೇರೆ ಕಡೆ ಹೋಗಬೇಕೆಂದು ಹೇಳಿ ಕಳಿಸಿದ ಎಂದರೆ ಸರಿಯಲ್ಲ. ಆರೋಪಿಗಳಿಬ್ಬರೂ ಸೇರಿಕೊಂಡು ನಿಂಗಪ್ಪ ಶಿರಗುಪ್ಪಿ ನಮ್ಮ ಮಾವನ ಟ್ರ್ಯಾನ್ಸಪೋರ್ಟ ಮಳಿಗೆಯಲ್ಲಿ ಮಲಗಿಕೊಂಡಿದ್ದ ಎಂದರೆ ಸರಿಯಲ್ಲ. ಆರೋಪಿಗಳು ನಿಂಗಪ್ಪನ ತಲೆಗೆ ಕಬ್ಬಿಣದ ಪೋರ್ಕ ಮತ್ತು ವೀಲ್ ಪಾನ್ ನಿಂದ ಹೊಡೆದು ಕೊಲೆ ಮಾಡಿರುವ ವಿಷಯ ಮತ್ತು ನಮ್ಮ ಮಾವ ಅವನ ಮೈ ಮೇಲೆ ಧರಿಸಿದ್ದ ಬಟ್ಟೆಗಳನ್ನು ಸುಟ್ಟು ಹಾಕಿ ನಾನು ಕೊಟ್ಟ ಬಟ್ಟೆಗಳನ್ನು ಧರಿಸಿಕೊಂಡು ಬಂದ ವಿಚಾರ ಗೊತ್ತಾಗಿರುತ್ತದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ.

ನಾನು ---------------------------- ಗೊತ್ತಾಗಿರುತ್ತದೆ ಎನ್ನುವ ಸಾಕ್ಷಿಯ ತನ್ನ ಹೇಳಿಕೆ ಭಾಗವನ್ನು ಓದಿ ಹೇಳಿದಾಗ ಸಾಕ್ಷಿಯು ತಾನು ಈ ರೀತಿ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆ ಭಾಗವನ್ನು ನಿಪಿ-21 ಅಂತಾ ಗುರ್ತಿಸಲಾಯ್ತು. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯಮಾಡಲು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.